ವಿಮರ್ಶಕಿ ಎಂ.ಎಸ್. ಆಶಾದೇವಿ ಹಾಗೂ ಕತೆಗಾರ್ತಿ
ವೀಣಾ ಶಾಂತೇಶ್ವರ ಅವರು ನಡೆಸಿದ ಅಪರೂಪದ, ಅಪೂರ್ವ
ಜುಗಲ್‌ಬಂದಿಯನ್ನು 'ಮಯೂರ'ದ ಓದುಗರಿಗೆ ಕೊಡಲಾಗುತ್ತಿದೆ. ಪ್ರಶ್ನೆ–
ಉತ್ತರಗಳ ಗೊಡವೆ ಇಲ್ಲದ, ಆಪ್ತಗೆಳತಿಯರ ಸಂವಾದದ ರೂಪದಲ್ಲಿರುವ,
ಹೊಸ ಹೊಳಹು–ಹೊಳಪಿನ ಮಾತು–ಕತೆ ಇಲ್ಲಿದೆ. ಸಾಂಸ್ಕೃತಿಕ ರಂಗದ
ಪ್ರತಿಭಾವಂತರ ಈ ಬಗೆಯ ಸಂವಾದ ಮುಂದೆಯೂ ಇಲ್ಲಿ ಕಾಣಿಸಿಕೊಳ್ಳಲಿದೆ

**ವೀಣಾ:** ಆಶಾ, ಈ ಜುಗಲ್‌ಬಂದಿ ಬಗ್ಗೆ ಖರೆ ನನಗೆ ಬಹಳ ಸಂತೋಷ ಆಗ್ತಿದೆ. ಸಾಮಾನ್ಯವಾಗಿ ವಿಮರ್ಶೆ ಮತ್ತು ಇತರ ಸಾಹಿತ್ಯ ಪ್ರಕಾರಗಳ ನಡುವೆ ಒಂದು ಘರ್ಷಣೆ ಇದ್ದೇ ಇರುತ್ತದೆ. ಅವುಗಳನ್ನೆಲ್ಲ ಒಂದೇ ಧಾರೆಯಲ್ಲಿ ನೋಡೋದು ಬಹಳ ಆರೋಗ್ಯಪೂರ್ಣ ಅನ್ನಿಸತ್ತದೆ ನನಗೆ. ಮತ್ತೆ, ಇವೆಲ್ಲಾ ಒಂದೇ ಮರದ ಟೊಂಗೆಗಳು ಅಂತ ತಿಳಿಯೋದಿದೆಯಲ್ಲಾ ಅದು ಸಾಹಿತ್ಯದ ಶಕ್ತಿಯನ್ನ ಹೆಚ್ಚಿಸುತ್ತೆ. ನನಗೆ ನಿಮ್ಮ ವಿಮರ್ಶೆಯನ್ನ ಓದ್ತಾ ಇರೋವಾಗ – 'ಅರೆ, ನನಗೂ ಹೀಗೇ ಅನ್ನಿಸುತ್ತದೆ, ಅದನ್ನೇ ಇವರು ಹೇಳಿದ್ದಾರೆ' ಅಂತ ಎಷ್ಟೋ ಸಲ ಅನ್ನಿಸಿದೆ.

**ಆಶಾ:** ಸಾಮಾನ್ಯವಾಗಿ ಈ ಮಾತನ್ನ ಕಾವ್ಯ, ಕತೆ ಅಥವಾ ಸೃಜನಶೀಲ ಅಂತ ಕರೆಯಲಾಗುವ ಪಠ್ಯಗಳ ಮಟ್ಟಿಗೆ ಮತ್ತೆ ಮತ್ತೆ ಹೇಳ್ತೀವಿ. ವಿಮರ್ಶೆಯ ಬಗ್ಗೆ ಇದನ್ನ ಹೇಳೋರು ಕಡಿಮೆ.

**ವೀಣಾ:** ನನಗಂತೂ ವಿಮರ್ಶೆಯನ್ನ ಎರಡನೆಯ ದರ್ಜೆಯದು ಅಂತ ಹೇಳೋದರಲ್ಲಿ, ಅಥವಾ ಕಿಂಚಿದೂನ ಅಂತ ಹೇಳೋದ್ರಲ್ಲಿ ನಂಬಿಕೆ ಇಲ್ಲ. ವಿಮರ್ಶೆಯ ಪಾತ್ರವೂ ಕಾವ್ಯದಷ್ಟೇ ಮುಖ್ಯ ಅಂತ ನಂಬಿದವಳು ನಾನು. ಟಿ.ಎಸ್. ಎಲಿಯೆಟ್, ಎಚ್.ಎಸ್. ರಾಘವೇಂದ್ರರಾವ್, ಡಿ.ಆರ್. ನಾಗರಾಜ್, ಆಶಾದೇವಿ... ಮೊದಲಾದವರ ವಿಮರ್ಶೆಯನ್ನ ಓದೋದು ನನಗೊಂದು ರಸಾನುಭವವೂ ಆಗಿದೆ.

**ಆಶಾ:** ಬರೆಯಬೇಕು ಅಂತ ಅದಮ್ಯವಾಗಿ ಅನ್ನಿಸಿದ 'ಆ' ಗಳಿಗೆಯ ಬಗ್ಗೆ, ಅದರ ಹಿಂದಿನ ಒತ್ತಡದ ಬಗ್ಗೆ ಹೇಳಿ.

**ವೀಣಾ:** ನನ್ನ ಸೀಮಿತ ಅನುಭವದ ಜೀವನದಲ್ಲಿ ಅನೇಕ ಸಲ, ಅನೇಕ ಸಂಗತಿಗಳು ನನ್ನ ಮನಸ್ಸನ್ನ ಆಳವಾಗಿ ತಟ್ಟುತ್ತವೆ. ಕೆಲವಂತೂ ಸತತವಾಗಿ ಕಾಡತೊಡಗುತ್ತವೆ. ನಾನು ಯಾವಾಗಲೂ ದಿಢೀರ್ ಅಂತ ಏನನ್ನೂ ಬರೆಯುವವಳಲ್ಲ. ಮನಸ್ಸನ್ನ ಕಲಕಿ ಚಿಂತೆಗೀಡುಮಾಡುವ ವಿಷಯದ ಬಗ್ಗೆ ಹಾಗೇ ಸುಮ್ಮನೇ ಯೋಚಿಸ್ತಾ ಇರ್ತೀನಿ. ವರ್ಡ್ಸ್ ವರ್ತ್ ಹೇಳ್ತಾನಲ್ಲ, **emotions recollected in tranquility** ಅಂತಾ, ಅದು ಖಂಡಿತವಾಗಿಯೂ ಇದೇ. ಈ ಹೊತ್ತಲ್ಲಿ ಮನಸ್ಸು ಭಾರ, ತಲೆಭಾರ. ಹೀಗೆ ಸುಮಾರು ದಿನ ಕಳೆದ ಮೇಲೆ (ಒಂದೊಂದು ಸಲ ಅದೂ ತಿಂಗಳುಗಟ್ಟಲೆಯೂ ಆಗಿರುತ್ತದೆ) ಆಮೇಲೊಂದು ದಿನ ಬರೆಯೋದಿಕ್ಕೆ ಶುರು ಮಾಡ್ತೀನಿ. ಒಮ್ಮೆ ಕೂತರೆ ಮತ್ತೆ ತಡವಾಗೋದಿಲ್ಲ. ಒಂದೆರಡು ದಿನಗಳಲ್ಲಿ ಬರೆದು ಮುಗಿಸಿಬಿಡ್ತೀನಿ. ಇದು ಕತೆಗಳಿಗೆ ಮಾತ್ರ. ಕಾದಂಬರೀನೋ ಅನುವಾದಾನೋ ಆಗಿದ್ದಾಗ ಹೆಚ್ಚು ಸಮಯ ಬೇಕಾಗುತ್ತದೆ. ಬರೆದ ಮೇಲೆ ಮಾತ್ರ ಹಕ್ಕಿಯಂತೆ ಹಗುರ ಅನ್ನಿಸುತ್ತೆ, ಖುಷಿಯಾಗುತ್ತೆ.

**ಆಶಾ:** ಓದು–ಬರವಣಿಗೆಯಲ್ಲಿ ಆಸಕ್ತಿ ಮೂಡಿಸಿದ ನಿಮ್ಮ ಬಾಲ್ಯ, ಮನೆಯ ವಾತಾವರಣ ಹೇಗಿತ್ತು?